# ‘ಮಾಡೆಲಿಂಗ್ ಮೋಹದಿಂದ ನಟನಾದೆ



## ಶಿವಕುಮಾರ್ ಮಹಾಂತೇಶ್ ಮಾರಿಹಾಳ್

### ಉದಯದ ‘ಮಾನಸ ಸರೋವರ’ದ ಚಿಂತನ್

★ *ಬೆಂಗಳೂರಿಗೆ ಬಂದಿದ್ದು ಏಕೆ?*

ವಿಜ್ಞಾನ ವಿದ್ಯಾರ್ಥಿ ನಾನು. ಓದುವಾಗ ಎಂದೂ ಒಂದೇ ಒಂದು ವೇದಿಕೆ ಹತ್ತಿದ ಅನುಭವ ಕೂಡ ಇಲ್ಲ. ನಮ್ಮ ಮನೆಯಲ್ಲಿ ಎಂಜಿನಿಯರಿಂಗ್ ಮಾಡಿಸಬೇಕು ಎನ್ನುವ ತುಡಿತ. ಪಿಯುಸಿಯಲ್ಲೇ ಏನಾದರೂ ಮಾಡಿ ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಿದೆ. ಅದೆಲ್ಲಾ ವಿಫಲವಾಯಿತು. ಪರೀಕ್ಷೆಯಲ್ಲಿ ಶೇ.90 ಅಂಕ ಗಳಿಸಿದೆ. ಸಿಇಟಿ ಕೂಡ ಓದದೆ ಬರೆದಿದ್ದರೂ 22 ಸಾವಿರ ರ್‍ಯಾಂಕಿಂಗ್ ಬಂದಿತ್ತು. ನಮ್ಮೂರು ಬೆಳಗಾವಿ, ಅಲ್ಲೇ ಬಿಇಗೆ ಸೀಟು ಸಿಕ್ಕಿತು. ಅದರಿಂದ ತಪ್ಪಿಸಿಕೊಳ್ಳಬೇಕು, ‘ಮಿಸ್ಟರ್ ಇಂಡಿಯಾ’ಕ್ಕೆ ಸ್ಪರ್ಧೆ ನೀಡಬೇಕು ಎನ್ನುವುದು ನನ್ನ ಕನಸು. ನಮ್ಮ ಮನೆಯವರ ಬಯಕೆ ಎಂಜಿನಿಯರ್. ಹೀಗಿರುವಾಗ ತಂದೆಯ ವಿರೋಧ ಕಟ್ಟಿಕೊಳ್ಳಲು ಆಗದೆ ಅನಿವಾರ್ಯವಾಗಿ ಬಿಇ ಸೇರಿದೆ. ಪರೀಕ್ಷೆಯನ್ನು ಒಲ್ಲದ ಮನಸ್ಸಿನಿಂದ ಬರೆದರೂ ಎಲ್ಲಾ ವಿಷಯಗಳಲ್ಲೂ ಪಾಸಾಗಿದ್ದೆ. ಆಗ ನಿಜಕ್ಕೂ ನನಗೆ ಚಿಂತೆ ಕಾಡಲು ಶುರುವಾಯಿತು. ಹೀಗೆ ಆದರೆ ಇಲ್ಲೇ ಕಳೆದು ಹೋಗುತ್ತೇನೆ ಎಂದು ನನ್ನ ತಂದೆಗೆ ಮನ ಒಲಿಸಿ ಮಾಡೆಲಿಂಗ್ ಮಾಡಲು ಬೆಂಗಳೂರಿಗೆ ಬಂದೆ.

★ *ಮಾಡೆಲಿಂಗ್ ಬಿಟ್ಟು ನಟನಾಗಿದ್ದು ಹೇಗೆ?*

ಮಾಡೆಲಿಂಗ್ ಮಾಡುವಾಗ ನನಗೆ ಮಾರ್ಗದರ್ಶಕರಾಗಿದ್ದ ಸಾಯಿ ಎಂಬುವವರು ‘ನಿನ್ ಲುಕ್ ನಟನೆಗೆ ಹೆಚ್ಚು ಸೂಕ್ತ ಆಗುತ್ತದೆ. ಪ್ರಯತ್ನ ಮಾಡಿ ನೋಡು’ ಎಂದು ಸಲಹೆ ನೀಡಿದರು. ಅಷ್ಟು ಮಾತ್ರ ಅಲ್ಲದೆ ಆಡಿಷನ್‌ಗೆ ಕಳುಹಿಸಿದರು. ‘ನಾಗಕನ್ನಿಕೆ’ಗೆ ಆಡಿಷನ್ ಬೆಂಗಳೂರಿನ ಉತ್ತರಹಳ್ಳಿಯ ಕಲ್ಯಾಣ ಮಂಟಪದಲ್ಲಿ ನಡೆದಿತ್ತು. ಅಲ್ಲಿ ಜನಸಾಗರ ನೋಡಿ ಬೆಚ್ಚಿ ಬಿದ್ದೆ. ನಟನೆಯೇ ನನಗೆ ಗೊತ್ತಿಲ್ಲ. ಹೀಗಿರುವಾಗ ಸವಾಲನ್ನು ಹೇಗೆ ಎದುರಿಸಲಿ ಎನ್ನುವ ಪ್ರಶ್ನೆ ನನ್ನನ್ನು ಕಾಡಿತು. ಅಲ್ಲಿ ಪ್ರಭು ಎನ್ನುವವರು ‘ನಾಳೆ ರಾಜರಾಜೇಶ್ವರಿ ನಗರದಲ್ಲಿ ಅಂತಿಮ ಆಡಿಷನ್ ನಡೆಯುತ್ತಿದೆ. ನೀನು ಅಲ್ಲಿಗೆ ನೇರವಾಗಿ ಬಾ’ ಎಂದು ಹೇಳಿದರು. ಅಲ್ಲಿ ನನಗೆ ಕೆಲವು ಡೈಲಾಗ್ ಕೊಟ್ಟರು. 4ನೇ ಟೇಕ್‌ಗೆ ಸರಿಯಾಗಿ ಬಂತು. ಪ್ರೀತಂ ಪಾತ್ರಕ್ಕೆ ಆಯ್ಕೆಯಾದೆ. ಅದಾದ ನಂತರ ಕೌಟುಂಬಿಕ ಕಾರ್ಯನಿಮಿತ್ತ ಒಂದಿಷ್ಟು ದಿನ ವಿರಾಮ ತೆಗೆದುಕೊಂಡೆ. ಅದೇ ಸಮಯಕ್ಕೆ ‘ಕೃಷ್ಣ ತುಳಸಿ’ ಮತ್ತು ‘ಶ್ರೀ’ಗೆ ಅವಕಾಶ ಬಂದಿದ್ದವು. ನನಗೆ ಆ ಸಂದರ್ಭದಲ್ಲಿ ಸಾಧ್ಯ ಇಲ್ಲದ ಕಾರಣ ಒಪ್ಪಲಿಲ್ಲ. ಅದಾದ ನಂತರ ‘ಚಿಂತನ್’ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ.

★ *ಚಿಂತನ್ ಪಾತ್ರ ಹೇಗಿದೆ?*

ಹಿರಿಯ ನಟರ ನಡುವಿನ ಒಡನಾಟ ಲಭಿಸಿದೆ. ಪಾತ್ರ ತುಂಬಾ ಚೆನ್ನಾಗಿದೆ. ಹಾಸನದಲ್ಲಿ ಕಳೆದ ವಾರಾಂತ್ಯದಲ್ಲಿ ಉದಯದ ಸೀರಿಯಲ್ ಹಬ್ಬ ಮಾಡಲಾಯಿತು. ಅದರಲ್ಲಿ ನಾನು 5 ಕಾರ್ಯಕ್ರಮಗಳನ್ನು ನೀಡಿದೆ. ಅಲ್ಲಿಯ ಜನರು ತುಂಬಾ ಪ್ರೀತಿಯಿಂದ ಬರಮಾಡಿಕೊಂಡಿದ್ದರು. ಅದು ನನಗೆ ಎಲ್ಲಿಲ್ಲದ ಸಂತೋಷ ಕೊಟ್ಟಿದೆ. ಅವರ ಅಭಿಮಾನದ ಪ್ರೀತಿ ಮತ್ತಷ್ಟು ಹುಮ್ಮಸ್ಸನ್ನು ತುಂಬಿದೆ. ಜೀವನದಲ್ಲಿ ನಟನಾಗಿಯೇ ಮುಂದುವರಿಯುತ್ತೇನೆ. ನಟನಾಗಿದ್ದಕ್ಕೆ ಜನಾಭಿಮಾನ ದೊರೆಯುತ್ತಿದೆ.

★ *ಪಾತ್ರದ ಆಯ್ಕೆಯ ಆದ್ಯತೆಗಳು ಏನು?*

ಪಾತ್ರಕ್ಕೆ ಇಂತಹದ್ದೇ ಸ್ವರೂಪ ಇರಬೇಕು ಎನ್ನುವ ಬಯಕೆ ಇಲ್ಲ. ಎಂತಹದ್ದೇ ಪಾತ್ರವಾದರೂ ಸೈ ಎನ್ನುವುದು ನನ್ನ ಭಾವನೆ. ನಿರ್ದೇಶಕರು ಏನನ್ನು ಹೇಳುತ್ತಾರೋ ಅದರಂತೆ ಅಭಿನಯಿಸುವುದಷ್ಟೇ ನನ್ನ ಕರ್ತವ್ಯ. ಎಂತಹ ಪಾತ್ರ ಕೊಟ್ಟರೂ ಅದನ್ನು ನಿಭಾಯಿಸುತ್ತೇನೆ. ಚಿತ್ರೀಕರಣದ ಸಂದರ್ಭದಲ್ಲಿಯೂ ನನ್ನ ಪಾತ್ರವನ್ನು ಬಿಟ್ಟು ಬೇರೆ ಯಾವುದನ್ನೂ ನಾನು ತಲೆಗೆ ಹಾಕಿಕೊಳ್ಳುವುದಿಲ್ಲ. ನನ್ನ ಪಾತ್ರ ಮುಗಿಯುವ ತನಕ ಡೈಲಾಗ್ ಮತ್ತು ಅದಕ್ಕೆ ನಾನು ದೇಹ ಭಾಷೆಯನ್ನು ಹೇಗೆ ಒಗ್ಗಿಸಬೇಕು ಎಂದು ಮನನ ಮಾಡಿಕೊಳ್ಳುತ್ತಿರುತ್ತೇನೆ. ಅಂದರೆ ಯಾವುದೇ ಪಾತ್ರವಾದರೂ ಅದಕ್ಕೆ ನ್ಯಾಯವನ್ನು ನೀಡುವುದು ನನ್ನ ಕರ್ತವ್ಯ.

★ *ದೈಹಿಕ ತಾಲೀಮು ಹೇಗೆ ನಿರ್ವಹಿಸುತ್ತೀರಿ?*

ಯಾವುದೇ ಕಾರಣಕ್ಕೂ ಜಿಮ್ ಮಿಸ್ ಮಾಡುವುದಿಲ್ಲ. ನನ್ನ ಮಾರ್ಗದರ್ಶಕರು ಹೇಳಿದಂತೆಯೇ ಊಟೋಪಚಾರ ಮಾಡುತ್ತೇನೆ. ಅವರು ಹೇಳಿದ್ದನ್ನು ಕಟ್ಟುನಿಟ್ಟಿನಿಂದ ಪಾಲಿಸುತ್ತೇನೆ. ನೀರು ಕುಡಿಯುವ ಪ್ರಮಾಣದಲ್ಲಿಯೂ ವ್ಯತ್ಯಾಸ ಆಗುವುದಿಲ್ಲ. ತರಕಾರಿ, ಬೇಯಿಸಿದ ಮೊಟ್ಟೆ, ಕೋಳಿಮಾಂಸ ನನ್ನ ಆಹಾರದ ಭಾಗ. ಪ್ರತಿವಾರವೂ ಡಯಟ್‌ನಲ್ಲಿ ಬದಲಾವಣೆ ಆಗುತ್ತಿರುತ್ತದೆ. ಹಾಗಾಗಿ ಆಹಾರ ಕ್ರಮ ಹೀಗೇ ಎಂದು ಹೇಳಲಾಗುವುದಿಲ್ಲ. ನನ್ನ ದೇಹ ಸ್ಥಿತಿಯ ಆಧಾರದ ಮೇಲೆ ಊಟೋಪಚಾರ ಬದಲಾವಣೆ ಆಗುತ್ತದೆ.

■ ರಾಘವೇಂದ್ರ